ಓ.ಎಸ್. 143/2020 ಪಿ.ಡಬ್ಲ್ಯೂ: 1

ದಿನಾಂಕಃ 08.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀಸವಾಲುಃ</u> ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎಸ್ ವೈ ಅವರಿಂದ -

1. ನಾನು ಪಿ.ಯು.ಸಿ.ವರೆಗೆ ಓದಿದ್ದೇನೆ. ನಾನು ಹಾಜರುಪಡಿಸಿರುವಂತಹ ದಾಖಲೆಗಳನ್ನು ಬಿಟ್ಟರೆ ಪ್ರಸ್ತುತ ದಾವೆಗೆ ಸಂಬಂಧಪಟ್ಟಂತೆ ಬೇರೆ ದಾಖಲಾತಿಗಳನ್ನು ನನ್ನ ಬಳಿ ಇವೆ. ಯಾವ ದಾಖಲಾತಿಗಳು ಇವೆ ಎಂಬ ಪ್ರಶ್ನೆಗೆ ಎಮ್.ಆರ್., ಆರ್.ಟಿ.ಸಿ ಹಾಗೂ ತಿಮ್ಮೇಗೌಡ, ತಮ್ಮೇಗೌಡರವರ ಮಗ ಎಂಬುವ ಪುರಾವೆ ದಾಖಲಾತಿಗಳು, ಮತ್ತು ಸುಬ್ಬಮ್ಮನವರ ಗಂಡ ತಮ್ಮೇಗೌಡ ಅನ್ನುವ ಪುರಾವೆ ದಾಖಲಾತಿಗಳು ಇವೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ದಾಖಲಾತಿಗಳನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇವೆ. ದಾವೆ ಸಲ್ಲಿಸುವಾಗ ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ತೊಂದರೆ ಇರಲಿಲ್ಲ ಹಾಗೂ ಅವಶ್ಯಕತೆ ಕೂಡ ಇರಲಿಲ್ಲ, ಈಗ ನೀವು ಕೇಳಿದ್ದಕ್ಕೆ ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿದಾರರು ಸದರಿ ದಾಖಲಾತಿಗಳನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿದಿದ್ದರಿಂದ ಸದರಿ ದಾಖಲಾತಿಗಳನ್ನು ಮುಂದಿನ ದಿನಾಂಕದಂದು ಹಾಜರುಪಡಿಸುವಂತೆ ನಿರ್ದೇಶನ ನೀಡಿ ಪಾಟೀಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

( ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸ.,ಹುಣಸೂರು.